सरयू

# ಸರಯೂ

ವಿದ್ಯಾಕೇಂದ್ರ ವಾರ್ತಾಪತ್ರ

SARAYU - Kannada Monthly Regn. No. KARKAN/2014/62363

December Vol. : 4 Issue : 7 5119/ಹೇಮಲಂಬಿ ಸಂವತ್ಸರ ದಶಂಬರ್ 2017 ಪುಟ 8 Rs. 10/-

Postal Regn No. PTR/135/2016-18

Licensed to Post without pre-payment

License No: SK/WPP/PTR/177/2016-18

## ಗಣಿತ ಮತ್ತು ವಿಜ್ಞಾನ ಪ್ರಯೋಗಶಾಲೆ "ಜನಕ " ಕುಟೀರದ ಉದ್ಘಾಟನೆ







ಶ್ರೀರಾಮ ಹಿರಿಯ ಪ್ರಾಥಮಿಕ ಶಾಲೆಯ ಪೂರ್ವಗುರುಕುಲದ ಮಕ್ಕಳಿಗೆ ಅಭ್ಯಾಸಕ್ಕಾಗಿ ಗಣಿತ ಮತ್ತು ವಿಜ್ಞಾನ ಪ್ರಯೋಗಶಾಲೆ "ಜನಕ " ಕುಟೀರದ ಉದ್ಘಾಟನೆಯನ್ನು ಶ್ರೀ ಪ್ರೊ.ಮಲ್ಲಿಕಾರ್ಜುನಪ್ಪ (ಜೆ ಎಸ್ ಎಸ್ ವಿಶ್ವವಿದ್ಯಾನಿಲಯದ ಮಾಜಿ ಕುಲಪತಿ) ನೆರವೇರಿಸಿದರು.

ಜನಕಮಹಾರಾಜನ ಕುರಿತು ವಿದ್ಯಾರ್ಥಿಗಳು ಪ್ರದರ್ಶಿಸಿದ ಕಿರುಪ್ರಹಸನದ ಜೊತೆಗೆ ಪೂರ್ವಗುರುಕುಲ ಚಟುವಟಿಕೆಯ ವೀಡಿಯೋವನ್ನು ಅತಿಥಿಗಳು ವೀಕ್ಷಿಸಿದರು.

ಸಭಾ ಕಾರ್ಯಕ್ರಮದ ವೇದಿಕೆಯಲ್ಲಿ ಡಾ.ಪ್ರಭಾಕರ ಭಟ್ ಕಲ್ಲಡ್ಕ ಪ್ರಾಸ್ತಾವಿಕ ಮಾತುಗಳನ್ನಾಡಿ "ಜನಕ ಕುಟೀರ" ನಿರ್ಮಾಣಗೊಂಡ ಉದ್ದೇಶವನ್ನು ತಿಳಿಸಿದರು. ನಮ್ಮಲ್ಲಿ ಬೆಳೆದ ಮಕ್ಕಳು ನೀವು ನಮ್ಮ ದೇಶದಲ್ಲೇ ನಮ್ಮ ಹಿರಿಯರ ಮಧ್ಯದಲ್ಲೇ ಇರುವಂತಾಗಲಿ ಎಂಬುದು ನನ್ನ ಕೋರಿಕೆ ಎಂದು ಇನ್ನೋರ್ವ ಅತಿಥಿ ಪ್ರಕಾಶ್ ಎಸ್ ಅಯ್ಯಂಗಾರ್ (ಮಲೇಶ್ವರ ಬ್ರಾಹ್ಮಣ ಮಹಾಸಭಾದ ಅಧ್ಯಕ್ಷರು) ತಿಳಿಸಿದರು.

ಪ್ರೊ| ಮಲ್ಲಿಕಾರ್ಜುನ ಶ್ರೀ ಈಶ್ವರ ಹಿರೇಮನಿ, ಶ್ರೀ ಆರ್ ಮಂಜುನಾಥ, ಶ್ರೀ ಗೋಪಾಲ್ ಗನ್ದ್‌ಕೇರಿ, ಶ್ರೀ ಮುರಳಿ ಮೋಹನ್, ಶ್ರೀ ರಾಜೇಶ್ ಎಲ್.ಎನ್, ಶ್ರೀ ಬಾಲಕೃಷ್ಣ ಆಲಂಗಾರ್, ಶ್ರೀ ಗಿರೀಶ್, ಶ್ರೀ ಪೃಥ್ವಿ, ಶ್ರೀ ಹಿತೇಶ್, ಶ್ರೀ ಮಹೇಶ್, ಶ್ರೀ ಚಂದ್ರಶೇಖರ, ಶ್ರೀ ಮುರುಗೇಶ್, ಶ್ರೀ ಭರಣ್, ಶ್ರೀಮಂಜುನಾಥ, ಶ್ರೀ ಶಿವಪ್ರಸಾದ್, ಶ್ರೀ ಕುಮಾರ್, ಶ್ರೀ ರಮೇಶ್ ಬಾಬು, ಶ್ರೀ ಸಕಲೇಶ್ ಹಾಗೂ ಶಾಲಾ ಸಂಚಾಲಕರು, ಅಧ್ಯಕ್ಷರು ಉಪಸ್ಥಿತರಿದ್ದರು.





8.11.2017–ಶ್ರೀರಾಮಚಂದ್ರಾಪುರ ಮಠದ ಶ್ರೀಶ್ರೀಶ್ರೀ ರಾಘವೇಶ್ವರಭಾರತೀ ಮಹಾಸ್ವಾಮಿಗಳವರು ಈ ಹಿಂದೆ ಬಂದಾಗ ವಿದ್ಯಾಕೇಂದ್ರದ ಚಟುವಟಿಕೆಗಳನ್ನು ಗಮನಿಸಿದ್ದು, ಇದೀಗ ಪುನಃ ವಿಶೇಷ ಅವಲೋಕನಕ್ಕಾಗಿ ವಿದ್ಯಾ-ಕೇಂದ್ರಕ್ಕೆ ಭೇಟಿ ನೀಡಿದರು. ಸುಮಾರು 2.30 ಗಂಟೆಗಳ ಕಾಲ ವಿದ್ಯಾಕೇಂದ್ರದ ಪ್ರಮುಖರೊಂದಿಗೆ ಚಟುವಟಿಕೆಗಳ ಮಾಹಿತಿಯನ್ನು ಪಡಕೊಂಡು ಚರ್ಚಿಸಿ ಮಾರ್ಗದರ್ಶನ ಮಾಡಿದರು

## ಶ್ರೀರಾಮವಿದ್ಯಾಕೇಂದ್ರದ ಹಿರಿಯ ವಿದ್ಯಾರ್ಥಿಗಳ ಸಮಾವೇಶ "ಸ್ನೇಹ ಸಂಗಮ" – 19.11.2017

ಶ್ರೀರಾಮ ವಿದ್ಯಾಕೇಂದ್ರದ ಹಿರಿಯ ವಿದ್ಯಾರ್ಥಿಗಳ ಸಮಾವೇಶ ಸ್ನೇಹ ಸಂಗಮ ವಿದ್ಯಾಕೇಂದ್ರದ ಮಧುಕರ ಸಭಾಂಗಣದಲ್ಲಿ ಜರಗಿತು. ಬೆಳಿಗ್ಗೆ ಕ್ರೀಡಾರಂಜನೆ ಕಾರ್ಯಕ್ರಮವನ್ನು ವಿದ್ಯಾಕೇಂದ್ರದ ಅಧ್ಯಕ್ಷರು ನಾರಾಯಣ ಸೋಮಯಾಜಿ ಉದ್ಘಾಟಿಸಿದರು. ಮಹಿಳೆಯರಿಗೆ ಮತ್ತು ಪುರುಷರಿಗೆ ಪ್ರತ್ಯೇಕ ಕ್ರೀಡೆಗಳನ್ನು ನಡೆಸಲಾಯಿತು. ಬಳಿಕ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು. ನಂತರ ಸಭಾ ಕಾರ್ಯಕ್ರಮವನ್ನು ಡಾ. ಪ್ರಭಾಕರ ಭಟ್ ಕಲ್ಲಡ್ಕ ಇವರು ದೀಪ ಬೆಳಗಿಸಿ ಉದ್ಘಾಟಿಸಿದರು. ಸ್ನೇಹ ಸಂಗಮಕ್ಕೆ ಆಗಮಿಸಿದ ಹಿರಿಯ ವಿದ್ಯಾರ್ಥಿಗಳು ತಮ್ಮ ಜೀವನ ಹಾಗೂ ವಿದ್ಯಾರ್ಥಿ ಜೀವನ ಬಗ್ಗೆ ಅನುಭವದ ಮಾತನ್ನಾಡಿದರು. ವಿದ್ಯಾಕೇಂದ್ರದ ಸಂಚಾಲಕ ವಸಂತ ಮಾಧವ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಮಾರೋಪದಲ್ಲಿ ಡಾ. ಪ್ರಭಾಕರ ಭಟ್ ಮಾತನಾಡಿ ಸಂಸ್ಥೆ ಕಟ್ಟಿ ಬೆಳೆಸುವಲ್ಲಿ ಹಿರಿಯ ವಿದ್ಯಾರ್ಥಿಗಳ ಪಾತ್ರ ಬಹಳ ಮಹತ್ವದ್ದು ಎಂದರು. ಕಾರ್ಯಕ್ರಮದಲ್ಲಿ 278ಹಿರಿಯ ವಿದ್ಯಾರ್ಥಿಗಳು ಭಾಗವಹಿಸಿದ್ದು, ಪ್ರೌಢಶಾಲೆಯ ಪ್ರಾರಂಭದ ತಂಡದ ವಿದ್ಯಾರ್ಥಿಗಳು ಈ ಸಮಾವೇಶದಲ್ಲಿ ಭಾಗವಹಿಸಿದ್ದು ವಿಶೇಷವಾಗಿದೆ. ಅಲ್ಲದೇ ಡಾಕ್ಟರ್‌ಗಳು, ಇಂಜಿನಿಯರ್‌ಗಳು, ಬಿಲ್ಡರ್ಸ್‌ಗಳು, ಶಿಕ್ಷಕರು, ಗೃಹಿಣಿಯರು, ಕೃಷಿಕರು, ವ್ಯಾಪಾರಸ್ಥರು ಹಾಗೂ ಇತರ ಉದ್ಯೋಗಿಗಳು ಹಾಗೂ ವಿದ್ಯಾರ್ಥಿಗಳು ಹೀಗೆ ಎಲ್ಲಾ ರೀತಿಯ ಹಿರಿಯ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಯತೀನ್ ಕುಮಾರ್ ಏಳ್ತಿಮಾರ್ ನಿರೂಪಿಸಿ, ಸುಜಿತ್ ಕುಮಾರ್ ಸ್ವಾಗತಿಸಿ, ಶ್ರುತಿ ಉಪ್ಪಿನಂಗಡಿ ವಂದಿಸಿದರು.







## ಶಿಶುಮಂದಿರ



ಉತ್ಥಾನ ದ್ವಾದಶಿಯಂದು ತುಳಸೀ ಪೂಜೆಯನ್ನು ಆಚರಿಸಲಾಯಿತು. ಸೂರ್ಯನಾರಾಯಣ ಭಟ್ ಪೂಜೆ ನೆರವೇರಿಸಿ ಮಹತ್ವ ತಿಳಿಸಿದರು. ಒಟ್ಟು 150 ಮಕ್ಕಳು 100 ತಾಯಂದಿರು ಮತ್ತು ಪೋಷಕರು ಒಟ್ಟು 250 ಮಂದಿ ಭಾಗವಹಿಸಿದ್ದರು



ಪಾಲಕರ ಸಭೆ –1/11/2017

ಶ್ರೀರಾಮ ಶಿಶುಮಂದಿರದ 2ನೇ ಪಾಲಕರ ಸಭೆ ನಡೆಯಿತು. ಪ್ರಾರಂಭದಲ್ಲಿ ಶಿಶುಮಂದಿರಕ್ಕೆ ಬಂದ ನಂತರ ತಮ್ಮ ಮಕ್ಕಳಲ್ಲಿ ಆದ ಬದಲಾವಣೆಯನ್ನು ಹಂಚಿಕೊಂಡರು.



ಅಕ್ಕಮಹಾದೇವಿ ಶಿಶುಮಂದಿರ ಅಜ್ಜಿಬೆಟ್ಟು ಮತ್ತು ಶ್ರೀ ಗಣೇಶ ಶಿಶುಮಂದಿರ ಬೊಂಡಾಲ ಕೊಯ್ಲ ಗಣೇಶ ದೇವಸ್ಥಾನ, ಸಾವಿರ ಕಂಬದ ಬಸದಿ, ಕೊಡ್ಯಡ್ಕ ಅನ್ನಪೂರ್ಣೇಶ್ವರಿ ದೇವಸ್ಥಾನಕ್ಕೆ ಹೊರಸಂಚಾರ ಹಮ್ಮಿಕೊಳ್ಳಲಾಯಿತು.

## ಪ್ರಾಥಮಿಕ ಶಾಲೆ



ರಾಜ್ಯೋತ್ಸವ ಕಾರ್ಯಕ್ರಮವು ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ನಡೆಯಿತು. ಅಧ್ಯಾಪಕಿ ಶ್ರೀಮತಿ ಪ್ರೇಮ ಇವರು ರಾಜ್ಯೋತ್ಸವದ ಮತ್ತು ಉತ್ಥಾನ ದ್ವಾದಶಿಯ ಮಹತ್ವವನ್ನು ತಿಳಿಸಿದರು.



ವೇದವ್ಯಾಸ ಮಂದಿರದಲ್ಲಿ ಕನಕ ಜಯಂತಿಯ ನಿಮಿತ್ತ ಶ್ರೀಮತಿ ಅನ್ನಪೂರ್ಣ ಇವರು ಕನಕದಾಸರ ಬಗ್ಗೆ ವಿದ್ಯಾರ್ಥಿಗಳಿಗೆ ತಿಳಿಸಿದರು. ಶ್ರೀಮತಿ ಸಂಗೀತ ಉಪಸ್ಥಿತರಿದ್ದರು. ಅನಘ ಮತ್ತು ಆದಿಶ್ರೀ ಕನಕದಾಸ ಕೀರ್ತನೆಯನ್ನು ಹಾಡಿದರು.



18–11–2017 ಮಾಸಿಕ ಭಜನೆ, ಸಾಮೂಹಿಕ ಹುಟ್ಟುಹಬ್ಬ ಮತ್ತು ಝಾನ್ಸಿರಾಣಿ ಲಕ್ಷ್ಮೀಬಾಯಿ ಜನ್ಮ ದಿನಾಚರಣೆಯಲ್ಲಿ ಪ.ಪೂ ವಿಭಾಗದ ಅರ್ಥಶಾಸ್ತ್ರ ಉಪನ್ಯಾಸಕಿ ಕು. ಯಶಸ್ವಿನಿ ದೇವಾಡಿಗ.



06/11/17ರಂದು 6ನೇ ತರಗತಿಯ 82 ವಿದ್ಯಾರ್ಥಿಗಳು 10ಶಿಕ್ಷಕರ ಪ್ರವಾಸವನ್ನು ಕಣಿಪುರ, ಮುಜುಂಗಾವು, ಅನಂತಪುರ, ಮಧೂರು, ಮಲ್ಲ ದೇವಸ್ಥಾನ ಹಾಗೂ ಇತಿಹಾಸ ಪ್ರಸಿದ್ಧ ಬೇಕಲಕೋಟೆಗೆ ಆಯೋಜಿಸಲಾಗಿತ್ತು.



ದಿನಾಂಕ 1–11–2017 ರಂದು 5ನೇ ತರಗತಿಯ ಪ್ರವಾಸವು ಮಡಿಕೇರಿ, ಭಾಗಮಂಡಲ, ತಲಕಾವೇರಿಗೆ ಹಮ್ಮಿಕೊಂಡಿದ್ದು 63 ವಿದ್ಯಾರ್ಥಿಗಳು 10 ಶಿಕ್ಷಕರು ಭಾಗಿಯಾಗಿದ್ದರು.

## ಪ್ರೌಢ ಶಾಲೆ



02.11.2017 ಪ್ರೊ.ನಾಗರಾಜ್, ಅಧ್ಯಕ್ಷರು ಕೆಂಪೇಗೌಡ ಮೆಡಿಕಲ್ ಕಾಲೇಜು ಬೆಂಗಳೂರು, ಶ್ರೀ ಮುರಳಿಕುಮಾರ್, ಮ್ಯಾನೆಜಿಂಗ್ ಡೈ–ರೆಕ್ಟರ್ ಚಾರ್ಮಿಯನ್ಸ್, ಶ್ರೀ ಶಾಂತರಾಮ ಶೆಟ್ಟಿ ಕೊಪ್ಪ ಬೆಂಗಳೂರು, ಶ್ರೀ ಅನಂತ ಶೆಟ್ಟಿ, ಶ್ರೀ ಮಧುನಾಯಕ್ ಭಾ.ಜ.ಪ. ಬಳ್ಳಾರಿ, ಪ್ರೊ ಎಸ್. ಎಸ್ ಪಾಟೀಲ್, ಬಿ.ಜಿ.ಆರ್ ಕಾಲೇಜ್ ಬಳ್ಳಾರಿ, ಹಾಗೂ ಶ್ರೀ ವೀರಣ್ಣ ಗೌಡ, ವಕೀಲರು ಹೂವಿನಹಡಗಲಿ ಉಪಸ್ಥಿತರಿದ್ದರು.



ಪುತ್ತೂರು ವಿವೇಕಾನಂದ ಪದವಿಪೂರ್ವ ಕಾಲೇಜಿನಲ್ಲಿ 10ನೇ ತರಗತಿ ವಿದ್ಯಾರ್ಥಿಗಳಿಗೆ ನಡೆದ 'ಕನಸುಗಳು' ವೈಯಕ್ತಿಕ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳೊಂದಿಗೆ ತರಬೇತಿ ನೀಡಿದ ಶಿಕ್ಷಕರು ಹಾಗೂ ಮುಖ್ಯೋಪಾಧ್ಯಾಯರು.



ಪುತ್ತೂರು ವಿವೇಕಾನಂದ ಪದವಿಪೂರ್ವ ಕಾಲೇಜಿನಲ್ಲಿ 10ನೇ ತರಗತಿ ವಿದ್ಯಾರ್ಥಿಗಳಿಗೆ ನಡೆದ 'ಕನಸುಗಳು' ಇಂಚರ ಸಾಂಸ್ಕೃತಿಕ ಗುಂಪು ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳೊಂದಿಗೆ ತರಬೇತಿ ನೀಡಿದ ಶಿಕ್ಷಕರು ಹಾಗೂ ಮುಖ್ಯೋಪಾಧ್ಯಾಯರು.

## ಪ್ರೌಢ ಶಾಲೆ



ಪುಣ್ಯಕೋಟಿ ಮಠ ದಾವಣಗೆರೆ ಇಲ್ಲಿನ ಪೂಜ್ಯಶ್ರೀ ಜಗದೀಶ ದೇವರು ಸರಸ್ವತಿ ವಂದನೆಯಲ್ಲಿ



ಪ್ರೌಢಶಾಲಾ ವಿಭಾಗದ ವಾರ್ಷಿಕ ಕ್ರೀಡಾಕೂಟವನ್ನು ಸತೀಶ್ ಭಟ್ ಶಿವಗಿರಿ ಹಾಗೂ ಕುಲ್ಯಾರ್ ನಾರಾಯಣ ಶೆಟ್ಟಿ ಉದ್ಘಾಟಿಸಿದರು



ಕಲಾಶ್ರೀ ಪ್ರಶಸ್ತಿಗೆ ಆಯ್ಕೆಯಾದ ವಿದ್ಯಾರ್ಥಿಗಳಿಗೆ ತಾ.ಮಹಿಳಾ ಅಭಿವೃದ್ಧಿ ಅಧಿಕಾರಿಗಳು ವಿದ್ಯಾಕೇಂದ್ರದ ಪ್ರಮುಖರ ಸಮ್ಮುಖದಲ್ಲಿ ಪ್ರಶಸ್ತಿ ವಿತರಿಸಿದರು



10.11.2017ರಂದು ನಡೆದ ಸರಸ್ವತಿ ವಂದನಾದಲ್ಲಿ ಶ್ರೀ ಗೋಪಿನಾಥನ್ ವಿದ್ಯಾಭಾರತಿ ಕ್ಷೇತ್ರೀಯ ಸಂಘಟನಾ ಕಾರ್ಯದರ್ಶಿ, ಶ್ರೀ ವೆಂಕಟ್ರಮಣ ರಾವ್ ಪ್ರಾಂತ ನೈತಿಕ ಆಧ್ಯಾತ್ಮಿಕ ಶಿಕ್ಷಣ ಪ್ರಮುಖರು.



30.11.2017ರಂದು ನಿವೃತ್ತರಾದ ಶ್ರೀ ರಾಧಾಕೃಷ್ಣ ಅ.ವೈ. ರವರು ಗೀತಾಜಯಂತಿ ಕಾರ್ಯಕ್ರಮದಲ್ಲಿ ತಮ್ಮ ವೃತ್ತಿ ಜೀವನದ ಅನಿಸಿಕೆಯನ್ನು ತಿಳಿಸಿದರು. ಶ್ರೀ ವಸಂತ ಮಾಧವ, ರಮೇಶ್ ಎನ್. ಉಪಸ್ಥಿತರಿದ್ದರು.



11.11.2017 ಸರಸ್ವತಿ ವಂದನಾ ಕಾರ್ಯಕ್ರಮದಲ್ಲಿ ಅತಿಥಿಗಳಾಗಿ ಡಾ। ಹರೀಶ್, ಉತ್ತರಪ್ರದೇಶದ ಬ್ರೆಜ್ ಪ್ರಾಂತದ ಪ್ರಾಂತ ಪ್ರಚಾರಕ, ಶ್ರೀ ಉಮೇಶ್ ಮಂಗಳೂರು ವಿಭಾಗದ ಸಹವಿಭಾಗ ಪ್ರಚಾರಕರು.



ಶೈಕ್ಷಣಿಕ ಪ್ರವಾಸ ದಿನಾಂಕ 25.11.2017ರಂದು 9ನೇ ತರಗತಿಯ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರವಾಸ ನೆರವೇರಿತು. ಯಾಣ, ಗೋಕರ್ಣ, ಮುರುಡೇಶ್ವರ, ಮಿರ್ಜಾನ್ ಕೋಟೆಗಳಿಗೆ ಭೇಟಿ ನೀಡಿದರು. 47 ವಿದ್ಯಾರ್ಥಿಗಳು, 5 ಶಿಕ್ಷಕರು ಭಾಗವಹಿಸಿದ್ದರು.



ಕೊತ್ತಲ ಶ್ರೀ ಬಸವೇಶ್ವರ ಶಿಕ್ಷಣ ಸಂಸ್ಥೆ ಸೇಡಂನ ಅಧ್ಯಕ್ಷರಾದ ಶ್ರೀ ಶ್ರೀ ಸದಾಶಿವ ಸ್ವಾಮೀಜಿಯವರು ಪ್ರೌಢಶಾಲೆಯ ಸರಸ್ವತಿ ವಂದನೆಯಲ್ಲಿ ಪಾಲ್ಗೊಂಡರು.

## ಪದವಿ ಪೂರ್ವ



01/11/17 ರಿಂದ 04/11/17 ರವರೆಗೆ ಕನ್ಯಾಕುಮಾರಿ, ತಿರುವನಂತಪುರಂ, ಕೂಡಂ ಕುಲಂನ ಅಣುಸ್ಥಾವರಕ್ಕೆ ಮೊದಲ ಹಂತದ ಶೈಕ್ಷಣಿಕ ಪ್ರವಾಸವನ್ನು ಯೋಜಿಸಲಾಯಿತು.



10/11/17 ರಂದು ವಿದ್ಯಾಭಾರತಿಯ ಕ್ಷೇತ್ರೀಯ ಸಂಘಟನಾ ಕಾರ್ಯದರ್ಶಿ ಎ.ಸಿ. ಗೋಪಿನಾಥನ್ ಇವರು ವಿದ್ಯಾರ್ಥಿಗಳೊಡನೆ ಸಂವಾದ ನಡೆಸಿದರು.



ದಿನಾಂಕ 13/11/17ರಂದು ವಿಜ್ಞಾನ ವಿಭಾಗದ ವಿದ್ಯಾರ್ಥಿಗಳು ವಿವೇಕಾನಂದ ತಾಂತ್ರಿಕ ಮಹಾ ವಿದ್ಯಾಲಯ ಪುತ್ತೂರಿಗೆ ಭೇಟಿ ನೀಡಿದರು.



ಭಗೀರಥ ಪಾರಂಪರಿಕ ಕೂಟ ಆಯೋಜಿಸಿದ ಉಪನ್ಯಾಸ ಕಾರ್ಯಕ್ರಮದಲ್ಲಿ ಖ್ಯಾತ ಅಂಕಣಕಾರ ಶ್ರೀ ರೋಹಿತ್ ಚಕ್ರತೀರ್ಥ



ನವೆಂಬರ್ ತಿಂಗಳ ಭಜನೆಯನ್ನು ದ್ವಿತೀಯ ವಾಣಿಜ್ಯ 'ಎ' ವಿಭಾಗದ ವಿದ್ಯಾರ್ಥಿಗಳು ನಡೆಸಿಕೊಟ್ಟರು.

## ಪದವಿ

### ರಾಷ್ಟ್ರೀಯ ಸೇವಾ ಯೋಜನೆಯ ವಾರ್ಷಿಕ ವಿಶೇಷ ಶಿಬಿರ

ಶ್ರೀರಾಮ ಪ್ರಥಮದರ್ಜೆ ಮಹಾವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನೆಯ ವಾರ್ಷಿಕ ವಿಶೇಷ ಶಿಬಿರವು ದಿನಾಂಕ 17–11–2017ರಿಂದ 23.11.2017ರವರೆಗೆ ಒಡಿಯೂರು ಶ್ರೀ ಗುರುದೇವ ವಿದ್ಯಾಪೀಠ ಇಲ್ಲಿ ನಡೆಯಿತು. ಶಿಬಿರದ ಉದ್ಘಾಟನೆಯು ಪರಮಪೂಜ್ಯ ಶ್ರೀ ಶ್ರೀ ಗುರುದೇವಾನಂದ ಸ್ವಾಮೀಜಿಯವರ ಆಶೀರ್ವಾದದೊಂದಿಗೆ ನಡೆಯಿತು. ಕಾರ್ಯಕ್ರಮದಲ್ಲಿ ವಿದ್ಯಾಕೇಂದ್ರದ ಸಂಚಾಲಕರಾದ ಶ್ರೀ ವಸಂತ ಮಾಧವ, ಶ್ರೀ ತುಕರಾಮ ಪೂಜಾರಿ, ಶ್ರೀ ಮಹಾಬಲ ಶೆಟ್ಟಿ ಪಟ್ಲಗುತ್ತು, ಶ್ರೀ ಶಶಿಧರ ಮಾರ್ಲ, ಶ್ರೀ ಜಯಪ್ರಕಾಶ್ ಶೆಟ್ಟಿ, ಪರಮಪೂಜ್ಯ ಸಾಧ್ವಿ ಶ್ರೀ ಶ್ರೀ ಮಾತಾನಂದಮಯಿ ಮತ್ತಿತರು ಉಪಸ್ಥಿತರಿದ್ದರು.

ಪ್ರತಿದಿನವು ಜ್ಞಾನವಂದನಾ, ಭಕ್ತಿವಂದನಾ, ಅಂಗಾಂಗದಾನ ಅರಿವು, ಜಲವಂದನಾ, ಮೌಲ್ಯವಂದನಾ, ರಾಷ್ಟ್ರವಂದನಾ ಮುಂತಾದ ವಿಶಿಷ್ಟ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು, ಜೊತೆಗೆ ಶಿಬಿರಾರ್ಥಿಗಳಿಗೆ ಕಾರ್ಯಕ್ರಮ ಆಯೋಜನೆ, ವ್ಯಕ್ತಿತ್ವ ವಿಕಸನ, ಗ್ರಾಮೀಣ ಕ್ರೀಡೆಗಳು, ಗ್ರಾಮಜೀವನ ಮುಂತಾದ ಶೈಕ್ಷಣಿಕ ಚಟುವಟಿಕೆಗಳನ್ನು ನೀಡಲಾಗುತ್ತಿತ್ತು. ಪ್ರತಿನಿತ್ಯವು ಸುಮಾರು 1 ಗಂಟೆಗಳ ಕಾಲ ಶಿಬಿರಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನೀಡಲಾಗುತ್ತಿತ್ತು. ಶ್ರೀ ಗುರುದೇವ ವಿದ್ಯಾಪೀಠದ ಹತ್ತಿರ ನಿರ್ಮಾಣವಾಗುತ್ತಿದ್ದ ಪುಷ್ಕರಿಣಿಯ ಕೆಲಸ ಮತ್ತು ಶಾಲಾ ವಠಾರದಲ್ಲಿ ಸ್ವಚ್ಛತೆಯನ್ನು ಮಾಡಲಾಯಿತು.

ಶಿಬಿರವು ದಿನಾಂಕ 23.11.2017ರಂದು ಸ್ವಾಮೀಜಿಯವರ ದಿವ್ಯ ಸಾನಿಧ್ಯದೊಂದಿಗೆ ಸಮಾರೋಪಗೊಂಡಿತು. ವೇದಿಕೆಯಲ್ಲಿ ಪರಮಪೂಜ್ಯ ಸಾಧ್ವಿ ಶ್ರೀ ಶ್ರೀ ಮಾತಾನಂದಮಯೀ, ಶ್ರೀ ಸೇರಾಜೆ ಗಣಪತಿ ಭಟ್, ವಿವೇಕಾನಂದ ವಿದ್ಯಾವರ್ಧಕ ಸಂಘ ಪುತ್ತೂರು ಇದರ ಅಧ್ಯಕ್ಷರಾದ ಡಾ। ಪ್ರಭಾಕರ ಭಟ್ ಕಲ್ಲಡ್ಕ, ವಿದ್ಯಾಕೇಂದ್ರದ ಅಧ್ಯಕ್ಷರಾದ ನಾರಾಯಣ ಸೋಮಯಾಜಿ, ಪ್ರಾಚಾರ್ಯರಾದ ಕೃಷ್ಣ ಪ್ರಸಾದ ಕಾಯರ್‌ಕಟ್ಟೆ, ಶ್ರೀ ಸುರೇಶ್ ರೈ.ಕೆ ಮುಂತಾದವರು ಉಪಸ್ಥಿತರಿದ್ದರು.









Postal Regn No. PTR/135/2016-18 Licensed to Post without pre-payment License No: SK/WPP/PTR/177/2016-18

ಸರಯೂ

Vol. : 4 Issue : 7 Rs. 10/-

KARKAN/2014/62363
Posted at Kalladka P.O. on 10th and 15th of Every month

SRI RAMA VIDYAKENDRA TRUST (R.) Hanuman Nagar, Kalladka,
Bantwal Tq., Dakshina Kannada, Karnataka 574 222
Ph.: 08255-275273 / 275183 / 275073 / 275693 / 279673 / 200085 / 279479
Website : www.srvk.org E-mail : info@srvk.org

BOOK POST

ಸವಿಧೇ,

Sarayu Kannada Monthly Edited and Published and Printed by B. Narayana Somayaji on behalf of Sri Rama Vidyakendra Trust, Hanuman Nagara, Kalladka, Bantwal Tq, Dakshina Kannada - 574 222. Phone : 08255-275 273. Printed at Anagha Digital Square, Kaikamba, B.C. Road - 574 219, Bantwal Tq., Dakshina Kannada, Karnataka. Registration No. : KARKAN/2014/62363